ಬಂಬಳ್ಳಿ ಶಂಕರ ನಾರಾಯಣ ನಾವಡ.

ಹರಾಮಕೀರಣಿ

ಲಕ್ಷ್ಮೀಬಾಯಿ.

ಲೇಖಿಕೆ—ಜೈನಮಹಿಳೆ.

ಪ್ರಕಾಶಕರು:

ಶ್ರೀಮತಿ ಪಣಿಪಿಲ ಅರಮನೆ ದೇಜಮ್ಮನವರು.

೧೯೩೧.

ಬೆಲೆ—ಸದುಪಯೋಗ

…ರುತಿ ಪ್ರೆಸ್, ಕಾರ್ಕಳ.

...ಮೊತ್ತ ೧-೪ ನೆ ಪುಸ್ತಕಗಳು ಮುಗಿದಿವೆ. ಲಕ್ಷ್ಮೀಬಾಯಿ
ಪುರಿಕ್ಷೆ, ಪುಸ್ತಕಗಳನ್ನು [illegible] ತಪ್ಪಿದ್ದಕ್ಕೆ [illegible].

ಶಂಕರನಾರಾಯಣ, ಅಮ್ಮೆಂಬಳ.

ಲಕ್ಷ್ಮೀಬಾಯಿ.

ಲೇಖಿಕೆ—ಜೈನಮಹಿಳೆ.

ಪ್ರಕಾಶಕರು:

ಶ್ರೀಮತಿ ಪಣಪಿಲ ಅರಮನೆ ದೇಜಮ್ಮನವರು.

೧೯೩೧.

ಬೆಲೆ—ಸದುಪಯೋಗ.

ಮಾರುತಿ ಪ್ರೆಸ್, ಕಾರ್ಕಳ.

ಎರಡು ಮಾತು.

ಏಳೆಂಟು ವರ್ಷಗಳ ಮೊದಲು ನಾನು ಬರೆದಿದ್ದ 'ಅನಂತಮ
ಚರಿತ್ರೆ' ಯನ್ನು ಶ್ರೀಮತಿ ಪಣಪೀಲ ಅರಮನೆ ದೇಜಮ್ಮನವರು ಪ್ರಕ
ಪಡಿಸಿ ಧರ್ಮಾರ್ಥವಾಗಿ ಹಂಚಿದಾಗ, ಅದನ್ನೋದಿದ ಅನೇಕ ಬಂಧ
ಭಗಿನಿಯರು ನನ್ನನ್ನು ಪ್ರೋತ್ಸಾಹಿಸಿದುದರ ಫಲವಾಗಿ, ಅನಂತರದ
ನನ್ನ ಹಲವು ಪದ್ಯರಚನೆಗಳಲ್ಲಿ ಇದೊಂದು ಚಿಕ್ಕರಚನೆಯಾಗಿದೆ. ಈ
ಕಥೆಯು ಪುತ್ತೂರಿನ ಕರ್ಣಾಟಕ ಕೇಸರಿ ಪತ್ರಿಕೆಯಲ್ಲಿ ಧಾರಾವಾಹಿ
ರೂಪವಾಗಿ ೬೯ ಪದ್ಯಗಳುಳ್ಳದಾಗಿ ಪ್ರಕಟವಾಗಿದ್ದರೂ, ಈ ಕಥೆಯನ್ನು
ಕೂಡ ಸದರಿ ದೇಜಮ್ಮನವರು ಪುಸ್ತಕರೂಪವಾಗಿ ಪ್ರಕಟಿಸಿ, ಮೊದಲಿನ
ತೆಯೇ ಧರ್ಮಾರ್ಥವಾಗಿ ಹಂಚುವ ವ್ಯವಸ್ಥೆ ಮಾಡಿರುವುದರಿಂದ ಅವ
ಉದಾರ ಬುದ್ಧಿಗಾಗಿ ನಾನು ಕೃತಜ್ಞಳಾಗಿದ್ದೇನೆ.

ಈ ಪುಸ್ತಕವನ್ನು ಸಿದ್ಧಮಾಡುವ ಸಂದರ್ಭದಲ್ಲಿ ಇದಕ್ಕೆ ಅಲ್ಲಲ್ಲಿ ಕೆಲವು
ಹೆಚ್ಚಿಗೆ ಪದ್ಯಗಳನ್ನು ಸೇರಿಸುವಂತೆ ಸಂತೋಷಪೂರ್ವಕವಾಗಿ ಆಗಾಗ
ತಕ್ಕ ಸಲಹೆಗಳನ್ನಿತ್ತು, ಸಂಪೂರ್ಣ ಪುಸ್ತಕದೊಳಗಿನ ತಪ್ಪುಗಳನ್ನು ತಿದ್ದಿ
ಮುನ್ನುಡಿಯನ್ನು ಬರೆದುಕೊಟ್ಟ ಪ್ರಸಿದ್ಧ ವಿದ್ವಾಂಸರಾದ ಶ್ರೀಮಾನ್
ಮಂಜೇಶ್ವರ ಗೋವಿಂದಪೈಯವರ ಉಪಕಾರವನ್ನು ಎಂದಿಗೂ ಮರೆಯ
ಲಾರೆ.

ನೆಲ್ಲಿಕಾರ ಪೇಟೆ,
ಮಹಾವೀರ ಶಕ ೨೪೬೭
ಭಾದ್ರಪದ ಶು। ಪೂರ್ಣಿಮಿ.

ಜೈನ ಮಹಿಳೆ.

ಮುನ್ನುಡಿ.

ಶ್ರುತದೇವಿಯಾದ ಸರಸ್ವತಿಯೇ ಕವಿತೆಯ ಅಧಿಷ್ಠಾತ್ರಿಯಾದರೂ, ನ್ನಡ ಸಾಹಿತ್ಯದಲ್ಲಿ ಒಬ್ಬಿಬ್ಬರಿಗಿಂತ ಹೆಚ್ಚಿನ ಕಬ್ಬಿಗತಿಯರ ಕಾವ್ಯಗಳಾ ರಿ ಹೆಸರುಗಳೇ ಆಗಲಿ ದೊರೆತಿಲ್ಲವಾದರೆ, ಅಗ್ಗೆ ಹೆಂಗಸರಿಗೆ ಆ ತಕ್ಕ ದುಷ್ಯವಿದ್ದಿಲ್ಲ ಎಂಬುದೊಂದೇ ಕಾರಣವಾಗಿರಲಾರದು, ಸ್ತ್ರೀಸ್ವಭಾವೋ ತವಾದ ಶಾಲೀನತೆಯೂ, ಭೀರುತೆಯೂ ಸಾಕಷ್ಟು ಕಾರಣಗಳಾಗಿರಬೇಕು ಂಬುದು ನಮ್ಮ ತುಳುನಾಡಿನ ಕವಿವರ್ಯರಾದ ಶ್ರೀ ನಂದಳಿಕೆಯವರು ುಹಾಲಕ್ಷ್ಮಿ' ಎಂಬ ಹೆಸರಿನಲ್ಲಿ ಮೆಯ್ಮರಸಿಕೊಂಡು

'ಕನ್ನಡಿತಿಯೊರೆದ ನುಡಿಯೆಂದಿದಂ ಭಾವಿಸದೆ
ಕನ್ನಡಿಗನೊರೆದ ನುಡಿಯೆಂದು ಸಂಭಾವಿಪುದು'

ಂದು ನುಡಿದ ಆ ಅಮೋಘವಾದ ಸ್ವಭಾವೋಕ್ತಿಯಿಂದ ಸ್ಪಷ್ಟವಾಗುತ್ತದೆ. ವರು ಹಾಗೆಂದು ಇಂದಿಗೆ ಸುಮಾರು ೪೦ ವರ್ಷಗಳಾಗಿ ಹೋದರೂ, ಾತು

'ಕನ್ನಡಿಗನೊರೆದ ನುಡಿಯೆಂದಿದಂ ಭಾವಿಸದೆ
ಕನ್ನಡಿತಿಯೊರೆದ ನುಡಿಯೆಂದೆ ಸಂಭಾವಿಪುದು'

ಂದು ಇನ್ನೂ ಮಾರ್ಪಡದೆ ಉಳಿದಿದ್ದುದು ಕನ್ನಡ ಸಾಹಿತ್ಯದ ದುರ್ಭಾಗ್ಯ ವಿನಾ ಬೇರೆಯಲ್ಲ. ಆದರೆ ದೈವಯೋಗದಿಂದ ಅದು ಇತ್ತೀಚೆಗೆ ಾರ್ಪಡುತ್ತಲಿದೆ. ಇಂದಿಗೆ ಕೆಲವು ವರ್ಷಗಳಿಂದ ತಲೆದೋರಿ ದಿನೇ ನೇ ಬೆಳೆದು ಬರುತ್ತಿರುವ ಈ ರಾಷ್ಟ್ರೀಯ ಜಾಗ್ರತಿ ನಮ್ಮ ಮಾತೃಭೂ ಯಲ್ಲಿರುವ ಸಮಸ್ತ ದೇಶಗಳಲ್ಲಿಯ ಸಕಲ ಸಮಾಜಗಳಲ್ಲಿಯ ಸ್ತ್ರೀ

ಪುರುಷರನ್ನು ಏಕರೀತಿಯಾಗಿ ಎಚ್ಚರಿಸಿ, ಪುರುಷರನ್ನು ಹೇಗೋ ಹಾಗೇ ಸ್ತ್ರೀಯರನ್ನೂ ಸರಿಸಮಾನವಾಗಿ ಹುರಿದುಂಬಿಸಿ, ರಾಷ್ಟ್ರೀಯ ರಂಗದಲ್ಲಿ ಹೇಗೋ ಹಾಗೆ ಸಾಹಿತ್ಯದ ರಂಗದಲ್ಲಿ ಕೂಡ ಚೂಣಿವರಿಯುವಂತೆ ಅವರನ್ನು ಉತ್ತೇಜಿಸುವುದರಿಂದ, ಈ ವರೆಗಣ ರೂಢಿಯ ಮೇರೆಗೆ ಹಾಡ ಬಂದರೂ ಹಾಡಲಿಕ್ಕೆ ಅಳುಕುತ್ತಿದ್ದ ವಿವಿಧ ಭಾಷೆಗಳ ಕಬ್ಬಿಗತಿಯರು, ಈ ನವ ಪ್ರಭಾತದಲ್ಲಿ ಮೆಲ್ಲಮೆಲ್ಲನೆ ಮುಂದುವರಿದು ಕವಿಗಳ ಮೇಳವದಲ್ಲಿ ಕಲೆತು ಹಾಡುತ್ತಿರುವುದು ಆಯಾ ಸಾಹಿತ್ಯಗಳ ಮಾತ್ರವಲ್ಲ, ಸಮಗ್ರ ಭಾರತ ಭೂಮಿಯ ಜ್ಞಾನದ ಹಾಗೂ ಶಕ್ತಿಯ ವಿಕಾಸದ ಸಾಕೂತವಾದೊಂದು ಮುಂಗುರುತೆಂಬಲ್ಲಿ ಸಂದೇಹವಿಲ್ಲ. ಈ ಬಗೆಯಾಗಿ ಸ್ತ್ರೀಯರಿಗೆ ಅವರವರ ಸಮಯೋಚಿತವಾದ ಸಾಮಾಜಿಕ ಧರ್ಮಗಳನ್ನು ಹೊಸತಾಗಿ ನೇರಾಗಿ ಮನವರಿಸಿ, ಅವನ್ನವರು ಪುರುಷರೊಡನೆ ಸಮಸ್ಕಂಧರಾಗಿ ಪುರುಷರಂತೆಯೇ ಸಾಧಿಸತಕ್ಕುದು ಎಂಬೀ ಸತ್ಯಾರ್ಥವನ್ನು ಅವರಲ್ಲಿ ನೆಲೆಗೊಳಿಸಿ, ನಮ್ಮ ದೇಶದಲ್ಲಿ ನಿರರ್ಥಕವಾದ ರೂಢಿಯೇ ಇದುವರೆಗೆ ಸ್ತ್ರೀಪುರುಷರೊಳಗೆ ರೂಢಿಸಿರುವ ಆ ಕೃತ್ರಿಮ ತಾರತಮ್ಯಗಳನ್ನು ಕ್ರಮಶಃ ಕನಸಾಗಿಸುತ್ತಿರುವ ಈ ನವಯುಗದ ಸರ್ವಾಂಗೀನವಾದ ಉಪಸ್ಥಿತಿಗೆ ನಾವೆಷ್ಟು ಕೃತಜ್ಞರಾದರೂ ಸಾಲದು.

ಇತರ ವಿಷಯಗಳಲ್ಲಿ ಏವಂಚ ಗಂಡಸರೂ ಹೆಂಗಸರೂ ತಂತಮ್ಮ ಕರ್ತವ್ಯಗಳಲ್ಲಿ ಭಿನ್ನಾರ್ಥರಾಗಿರುವುದೇ ಲೇಸೋ? ಸಮಾನಾರ್ಥರಾಗಿದ್ದರೆ ಲೇಸೋ? ತನುಮನಗಳ ಸಂಸ್ಕೃತಿಯಲ್ಲಿ ಹೇಗೋ ಹಾಗೆಯೇ ಅವರವರ ಪರಸ್ಪರ ಕರ್ತವ್ಯಗಳಲ್ಲಿಯೂ ವ್ಯತ್ಯಾಸವಿರಬೇಡವೇ? ಎಂದು ಮೊದಲಾದ ಪ್ರಶ್ನೆಗಳು ಇನ್ನೂ ಎತ್ತಲ್ಪಡಬಹುದಾದರೂ, ಸಾಹಿತ್ಯವಿಷಯದಲ್ಲಿ ಮಾತ್ರ ಹಾಗಾಗದು. ಏಕೆಂದರೆ ನೇಸರು ಕಾಣಸದ ನಕ್ಷತ್ರಗಳನ್ನು ಶರ್ವರಿ

ಲ್ಲಿ ಕಾಣುವಂತೆ, ತಂದೆಯ ಸ್ನೇಹದಲ್ಲಿ ಇರಲಾರದ ಮಾರ್ದವವನ್ನು
ಯ ಪ್ರೇಮವು ಹುದುಗೊಳಿಸುವಂತೆ, ಗಂಡೆದೆಗೆ ಗಂಡು ಕಾಣಿಕೆಗೆ ಸಿಲು
ಎಷ್ಟೋ ಗಹನವಾದ ವಿಷಯಗಳ—ಪ್ರಧಾನವಾಗಿ ಪ್ರಣಯದ ಹಾಗೂ
ಮದ ರಹಸ್ಯವಾದ ಅನನ್ಯಸಾಧ್ಯವಾದ ಎಷ್ಟೋ ವಿಷಯಗಳ—ಹೊಸ
ಂದು ಬಗೆಯ ವೈಯ್ಯಕ್ತಿಕ ಸಂಪತ್ತು ಸಾಹಿತ್ಯಕ್ಕೆ ದಕ್ಕಬೇಕಾದರೆ ಕಬ್ಬಿ
ಯಿಂದ ತಾನೆ. ಉದಾಹರಣೆಯಾಗಿ ಹೇಳುವುದಾದರೆ. ಗ್ರೀಕರ
ಪ್ಫೊ' (Sappho) ಎಂಬ ಕಬ್ಬಿಗತಿಯ ಈ ವರೆಗೆ ದೊರೆತ ಕೆಲಕೆಲವು
ತೆಗಳ ಮುರುಕುಗಳಲ್ಲಿ ತುಳುಕಾಡುವ ಆ ಉತ್ಸುಕತೆ ಆ ಮಧುರಿಮೆ
ಜನಾಂಗದ ಕವಿಗಳ ಕವಿತೆಗಳಲ್ಲಿ ಕಾಣಬಾರದು. ಅದಕಾರಣ ಜಗ
ಯಾವಲ್ಲಿಯ ಸಾಹಿತ್ಯವಾದರೂ, ಕೆಲಕೆಲವಲ್ಲಿ ಕಬ್ಬಿಗತಿಯರೇ ಇಲ್ಲ,
ನ್ನುಳಿದವಲ್ಲಿ ಇರುವರಾದರೆ ಪರಸ್ಪರ ಪ್ರಮಾಣದಿಂದ ಕವಿಗಳಿಗಿಂತ
ಷ್ಟೋ ಕಡಿಮೆ ಎಂಬುದರಿಂದ, ಅನ್ಯಥಾ ಅದೆಷ್ಟು ಸಮೃದ್ಧವಾಗಿರಬಹು
ದರೂ, ಕಬ್ಬಿಗತಿ ತಾನೆ ಸಮನಿಸ ಬಲ್ಲ ಅದೊಂದು ವಿಶಿಷ್ಟವಾದ ಅನಿ
ಚನೀಯವಾದ ಸ್ವಾರಸ್ಯವನ್ನು ಕಬ್ಬಿಗನೆಂದಿಗೂ ಅಷ್ಟೇ ಪೂರ್ಣತೆ
ಂದ ಅಷ್ಟೇ ಸೂಕ್ಷ್ಮತೆಯಿಂದ ಅದಕ್ಕೆ ತರಲಾರನೆಂಬ ಇದೊಂದು ಕೊರ
ಯಿಂದ ತಾನೆ ಇನ್ನೂ ಅಸಮಗ್ರವೇ ಎಂಬುದನ್ನು ಮರೆಯಲಾಗದು.

ಕೆಲವು ವರ್ಷಗಳ ಹಿಂದೆ ಇದೇ ಲೇಖಿಕೆಯರು ಭಾಮಿನಿಷಟ್ಪದಿಯಲ್ಲಿ
ಸಿದ 'ಅನಂತಮತಿ' ಎಂಬೊಂದು ಚಿಕ್ಕ ಕಾವ್ಯವನ್ನು ಕಂಡಾಗ ಅದ
ತೋರಿದಾ ಪ್ರತಿಭೆಯ ಶುಕ್ರೋದಯವು ಬೇಗನೆ ಉಷಃಕಾಲದಲ್ಲಿ
ಣಮಿಸದಿರದೆಂದು ಭಾವಿಸಿದ್ದೆ; ಅದು 'ಲಕ್ಷ್ಮೀಬಾಯಿ' ಎಂಬೀ ಕವಿತೆ
ಲ್ಲಿ ಮೂಡಿದೆ. ೨-೩ ವರ್ಷಗಳ ಹಿಂದೆ ಪುತ್ತೂರಿನ 'ಕರ್ಣಾಟಕ ಕೇಸರಿ'
ಲ್ಲಿ ಕ್ರಮಶಃ ಪ್ರಕಟವಾದೀ ಕೃತಿ ಈವಾಗ ಪುಸ್ತಕರೂಪದಲ್ಲಿ ಪ್ರಕಟಿಸ

ಲ್ಪಟ್ಟುದು ಅಭಿನಂದನೀಯವೇ. ಕವಿತೆ ಚಿಕ್ಕದಾದರೂ ಇದು ಸವಿಯಾಗಿದೆ, ಸೊಗಸಾಗಿದೆ; ಕಬ್ಬಿಂದ ಹಿಳಿದ ಧಾರೆಯಲ್ಲ, ಹುಟ್ಟಿನ ಜೇನಂತೆ ಸೂಸುತ್ತಿದೆ. ಆಂಗ್ಲ ಕವಿ ಟೆನ್ನಿಸನನ (Tennyson) 'ಡೋರಾ' (Dora) ಎಂಬ ಆ ಚಿಕ್ಕ ಕವಿತೆಯಂತೆ ಇದು ಒಂದೇ ಸವನೆ ಸರಳವೂ, ಸುಗಮವೂ, ಮನೋಜ್ಞವೂ ಆಗಿದೆ. ಕಥೆ ಕಿರಿದಾದರೂ ಈ ಕವಿತೆಯಲ್ಲಿ ಒಂದೆಡೆ ವಾರಾಂಗನೆಯ ಧರ್ಮಬುದ್ಧಿ. ಇನ್ನೊಂದೆಡೆ ಬ್ರಾಹ್ಮಣಿಯ ಪತಿಭಕ್ತಿ, ಇವಲ್ಲಿ ಯಾವುದು ಮೇಲೆಂದು ತಿಳಿಯಬಾರದಂತೆ ವಾಚಕರ ಮನಸ್ಸನ್ನು ಚಮತ್ಕಾರದಿಂದ ಅತ್ತಿತ್ತ ಆಡಿಸುತ್ತಿರುವ ಕವಿತಾಶಕ್ತಿ ಮಾತ್ರ ಕಿರಿದಲ್ಲ. ಇದರಿಂದ ಇವರು ಹುಟ್ಟುಕವಿ ಎಂಬುದು ತುಂಬ ವ್ಯಕ್ತವಾಗುತ್ತದೆ. ಒಂದೇ ಮಾತಿಂದ ಹೇಳುವುದಾದರೆ, ಈ ಕವಿತೆ

'ಹಸ್ತಪ್ರಾಪ್ಯ ಸ್ತಬಕ ನಮಿತೋ ಬಾಲಮಂದಾರವೃಕ್ಷಃ'

ಎಂಬಂತಿದೆ—ನುಡಿಗಳ ಹಸುರು ತಂಪು, ಭಾವನೆಗಳ ಬಿಳಿಯ ಸೊಂಪು, ಸುಲಭವಾದ ಅರ್ಥದ ಕಂಪು. ಗುಣಗ್ರಾಹಿಯಾದ ಯಾರು ತಾನೆ ಇದನ್ನೊಲ್ಲರು?

ಈ ಕಾವ್ಯಕ್ಕೆ ಅಗತ್ಯವಿರುವ ಕವಿತಾವೀಣೆಯ ತಂತಿಗಳು ಇಲ್ಲಿ ಬಾರಿಸಲ್ಪಟ್ಟವೆಯಾದರೂ ಅವು ಕೆಲವೇ, ಬಾರಿಸತಕ್ಕವು ಇನ್ನೂ ಇವೆ ಎಂಬುದರಿಂದ, ಇವರಿಗೆ ಆ ಸಾಧನವನ್ನು ಕೈಗೊಳಿಸಿರುವ ಆ ಭಾರತಿಯೇ ಅದನ್ನು ಪೂರ್ಣತಾನಗೊಳಿಸಿ, ಕನ್ನಡಸಾಹಿತ್ಯದಲ್ಲಿ ಅದು ವಿಪುಲವಾಗಿ ಇಂಚರಿಸುವಂತೆ ಇವರನ್ನು ಹರಸಲೆಂದೂ ಇವರ ನಿದರ್ಶನದಿಂದ ಗರಿದುಂಬಿ ಇನ್ನೂ ಅನೇಕ ಕಬ್ಬಿಗತಿಯರು ಹೊರಸೂಸಿ ತಮ್ಮ ಹಾಡುಗಳಿಂದ ಕನ್ನಡ ಸಾಹಿತ್ಯವನ್ನು ಉಕ್ಕೇರಿಸಲೆಂದೂ ಹಾರೈಸುತ್ತೇನೆ.

ಗೋವಿಂದ ಪೈ.

ಶ್ರೀ

ಲಕ್ಷ್ಮೀಬಾಯಿ.

ಬುಧವಂದ್ಯನಿಗೆರಗುತೀ ಕೃತಿಯ ನುಡಿಸೆನುತ ।
ಭಿನಮಿಸಿ ಶಾರದೆಗೆ ಭಕ್ತಿಯಿಂದೆನ್ನ ॥
ಭುವಿಸಾಣತಿಯಿಂದಲೀ ಕಥೆಯನೊರೆಯುವೆನು ।
ಭಮತಿಯರಾಲಿಸುವುದಾದರದೊಳಿದನು ॥ ೧ ॥

ಮಾತೆ ಪಣೆಗಿಟ್ಟ ತಿಲಕವೆಂಬಂದದೊಳು ।
ಮಣೀಯಕಮಪ್ಪ ಕಾಶಿ ನಾಮದೊಳು ॥

ಆಮಹಾನಗರಿ ರಂಜಿಪುದು ಬಲು ಸೊಗಸಿಂದ ।
ಸ್ವಾಮಿ ಶ್ರೀ ವಿಶ್ವನಾಥನ ಕರುಣದಿಂದ ॥ ೨

ಅಲ್ಲಿ ಹರಿಯುವ ಗಂಗೆ ಸತತ ನಿರ್ಮಲೆ ಎಂದು ।
ಎಲ್ಲ ದೇಶದ ಯಾತ್ರಿಕರು ನೆರೆದು ಬಂದು ।
ಸಲ್ಲಲಿತವಾಗಿ ಹರಿವಾ ಜಲದಿ ಮುಳುಗೆದ್ದು ।
ಉಲ್ಲಾಸದಿಂದಘವ ತೊಳೆವರನು ದಿನವು ॥ ೩

ಆ ನದಿಯ ತಟದಿ ಸುಜ್ಞಾನಿಗಳು ಗುಂಪಿನಲಿ ।
ನಾನಾಪರಿಯ ಧರ್ಮಗಳನು ಬೋಧಿಪರು ॥
ಏನೆಂಬೆ ಸಾಧುಸಂತರು ತಂಡತಂಡದಿಂ ।
ದಾನಂದದಿಂದ ಭಜನೆಯ ಮಾಡುತಿಹರು ॥ ೪

ಒಂದೆಡೆಯೊಳಂಧ ಮೂಕರ ಕಿವುಡ ಕುಂಟರಾ ।
ವೃಂದವಾ ಮಣ್ಣಿನಲಿ ಹೊರಳಾಡುತಿಹುದು ॥
ನೊಂದೆಮಗೆ ನೀಡಿ ಭಿಕ್ಷೆಯನು ಕಾಪಿಡಿರೆನುತ ।
ಮಂದಿಗಳಿಗಕಟ ಕೈಚಾಚಿ ಯಾಚಿಪುದು ॥ ೫

ರಿಂದಲೆದ್ದು ಗಗನವ ಸೋಂಕುವಂದದಲಿ ।
ೀರುವಾ ಶ್ರೀ ವಿಶ್ವನಾಥನಾಲಯವು ॥
ರು ಶಿಲೆಯಿಂದ ನಿರ್ಮಿತವಾಗಿ ಮೆರೆಯುವುದು ।
ಳವೊ ಬಣ್ಣಿಸಲ್ಕದರ ಸೊಬಗವುವಾ! ॥ ೬ ॥

ಗಿಲ ಮುಟ್ಟುವ ಗೋಪುರಗಳಲ್ಲಿ ಶಿಲ್ಪಿಗಳು ।
ಯು ಕೌಶಲದಿ ಕರಕೌಶಲದಿ ಕೊರೆದಾ ॥
ಬಗೆಯ ಚಿತ್ರಗಳು ಪೌರ್ವಿಕರ ಬಿನ್ನಾಣ ।
ಗುಮಿಗೆಯ ಸಾಮರ್ಥ್ಯಗಳ ತೋರುತಿಹವು ॥ ೭ ॥

ಯಲಿ ಮಿಂದು ಜನರೆಲ್ಲರಾನಂದದಲಿ ।
ಾಥರನರ್ಚಿಸುವರು ಭಕ್ತಿಯಲಿ ॥
ಾಳಿಪ ದೇಗುಲದ ಸೊಬಗಿಗಚ್ಚರಿವಟ್ಟು ।
ರದೀಕ್ಷಿಸುತಲರ್ತಿಯಲಿ ಬಣ್ಣಿಪರು ॥ ೮ ॥

ಚುಂಬಿತವಾದ ಸೌಧಗಳ ಸಾಲಿಂದ ।
ತೈಶ್ವರ್ಯ ಸಂಪನ್ನ ಜನರಿಂದ ॥

ಸುಗುಣಿ ಗಣದಿಂದ ವಿದ್ಯಾನಿಪುಣರಿಂದಯ್ದಿ ।
ಜಗದೊಳಗೆ ಮಿಗಿಲೆನಿಪುದಾ ಜೆಲ್ವ ನಗರಂ ॥ ೯ ॥

ಪರಮ ಪಾವನ ಪುಣ್ಯಕಾಗಾರವೆಂದೆಂಬ ।
ಉರುತರದ ಕೀರ್ತಿಯನು ಶಿರದೊಳಾಂತಿಹುದು ॥
ಕೊರತೆಯಿರದಲ್ಲಿ ಸಿರಿಸಂಪದಕೆ ವಿದ್ಯಾದಿ ।
ವರ ಧರ್ಮ ಕರ್ಮಶಾಸ್ತ್ರಾದಿ ಕಲೆಗಳಿಗೆ ॥ ೧೦

ಇನಿತು ಸಂಭ್ರಮದಿ ರಾರಾಜಿಸುವ ಪಟ್ಟಣದಿ ।
ವನಜಾಕ್ಷಿಯೋರ್ವಳಿಹಳೇನೆಂಬೆನವಳಾ ॥
ಜನಿಸಿದಳು ವೇಶ್ಯೆಯರ ಕುಲದೀಪವೆಂಬಂತೆ ।
ಮನುಮಥನ ಸತಿಯೊಡಲ ಜರೆವ ಕಾಂತಿಯೊಳು ॥ ೧೧

ಆರಮಣಿಮಣಿಯಾಸ್ಯವೆಸೆವುದೈ ಪೂರ್ಣಮಿಯ ।
ಚಾರು ಚಂದ್ರಮನ ಕಾಂತಿಯನು ಮೀರಿಸುತಾ ॥
ವಾರಿಜಾಕ್ಷಿಯು ಸೂರೆಗೈವಳೈ ನಿಮಿಷದೊಳು ।
ಭೂರಿ ಜನವರರ ಕಣ್ಮನವನೆರಕದೊಳು ॥ ೧೨

ಕವಿವರರು ತಮ್ಮ ಕೃತಿ ರಚನೆಗೈವಾಗವಳ ॥
ನುವನಮೋಹನರೂಪದುಪಮೆ ತೋರುಕರು ॥
ಅವಧರಿಸಿ ಚಿತ್ರಕಾರರು ಚಿತ್ರ ಲಿಖಿಪಾಗ ।
ಅವಳಂಗದೋಜೆಯನೆ ಅವರನುಸರಿಪರು ॥ ೧೩ ॥

ಅವಳ ಮುಖ ರಾಜೀವವವಳ ಜೆಂದುಟಿ ಬಿಂಬ ।
ನವಳ ನಾಸಿಕವು ಚಂಪಕವ ಪೋಲುವುದು ॥
ಅವಳ ನಡು ಹರಿಯಂತೆ ಪುರ್ಬು ಕಾಮನ ಬಿಲ್ಲು ।
ಅವಳ ನಡಿಗೆಯು ಹಂಸನಂತೆ ಶೋಭಿಪ್ಪದು ॥ ೧೪ ॥

ಎಳಲತೆಯ ಮಿಗುವ ಕೋಮಲತೆವೆತ್ತಿಹ ತನುವ ।
ತಳಿರ ಮೆದುವರುಣ ಕರಚರಣಗಳ ಜೆಲುವೆ ॥
ಅಳಿಗುರುಳ ಕಾಳಾಹಿವೇಣಿ ಕಾಮನ ಕೈಯ ।
ಗಿಳಿಯೊಲಾ ರಾಜಿಸುವಳಾ ವಾರರಮಣಿ ॥ ೧೫ ॥

ಕುಂದಕುಡ್ಮಲವೊ ಬಾಲೆಯ ದಂತಗಳೊ, ಕುಸುಮ ।
ಗಂಧಿನಿಯ ಮೈವೆಳಕೊ ಗೌರಚಂಪಕವೊ ॥

ಕಂಧರವ್ರೊ, ಕಂಬುವೊ ಸರೋಜಗಳೊ ನಯನಗಳೊ, ।
ಸುಂದರಿಯ ಸೊಬಗೊ ಕಾರ್ತಿಕದ ಚಂದ್ರಿಕೆಯೊ ॥ ೧

ತಳತಳಿಪ ವಸನ ಭೂಷಣಗಳಿಂ ಸಿಂಗರಿಸಿ ।
ಕುಲುಕುವೊಯ್ಯಾರದಿಂದಾ ವಾರಕಾಂತೆ ॥

ಬಳುಬಳುಕಿ ನಡೆತರುವ ನೋಡಿಯದು ರತಿದೇವಿ ।
ಸುಳಿತರುವಳೆಂಬ ಭ್ರಾಂತಿಯನೆ ಬೀರುವುದು ॥ ೧

ಲಕ್ಷಗಟ್ಟಲೆ ಜನರ ಕಣ್ಮನಂಗಳನೆಳೆದು ।
ತಕ್ಷಣವೆ ಸೂರೆಗೈವಳು ಕೋಮಲಾಂಗೀ ॥

ಲಕ್ಷ್ಮಿಬಾಯಿಯೆ ವೇಶ್ಯೆಯರೊಳಧಿಕ ಜಾಣೆ ದಿನ ।
ಲಕ್ಷ ಹೊನ್ನಿತ್ತವನ ಸಜ್ಜೆಗೈದುವಳು ॥ ೧

ಕುಡಿಗಣ್ಣನೋಟವೆಂದೆಂಬ ಮಾಯಾಜಾಲ ।
ಬೆಡಗಿನಿಂದೊಡ್ಡಿ ಸಿಲುಕಿಸುವಳು ತರುಣರನು ॥

ಅಡಿಗಡಿಗೆ ಮೃದುಮಧುರ ವಚನವಾಡಲು ಜನರು ।
ಕಡು ಸುಖಿಗಳಹೆವು ತಾವೆನುತುಬ್ಬುತಿಹರು ॥

ಅಂಗಕಾಳಿಂಗ ಕಾಂಭೋಜಾದಿಯೊಳಗೆಲ್ಲ ।
ಅಂಗನೆಯ ಲಾವಣ್ಯವಾರ್ತೆ ಪಸರಿಸಿತು ॥
ಅಂಗಜನ ಪೂಸರಳಿಗಳ್ಕುತ ಸಮಸ್ತರು ಶು ।
ಭಾಂಗಿಯೊಡನಾಟವನು ಹಂಬಲಿಸುತಿಹರು ॥ ೨೦ ॥

ಭೂವರೇಣ್ಯರು ಸಕಲ ಶ್ರೀಮಂತ ಸರದಾರ ।
ರಾ ವನಜ ಮುಖಿಯ ಸಲ್ಲಾಪ ಕೇಳಿಯೊಳು ॥
ಕೋವಿದರು ಸಾಹುಕಾರರು ಸರಾಫರು ಬಂದು ।
ನಾವು ನಾವೆನುತ್ತೈದಿ ರಾಶಿ ಹೊನ್ನ ಗಳ ॥ ೨೧ ॥

ಸುರಿದವಳ ಗೃಹದ ದ್ವಾರದಿ ನಿಂದು ಕಾಯುವರು ।
ಹರಿಣಾಕ್ಷಿ ಬರುವ ವೇಳೆಯನರಿಯುತವರು ॥
ಧರಣಿಯೊಳಗವಳ ಜಾಲಕೆ ಸಿಲುಕದಿಹ ಜನರು ।
ವಿರಳವೆನಲಿದುವೆ ದೃಷ್ಟಾಂತವಾಗಿಹುದು ॥ ೨೨ ॥

ಆ ರಮಣಿಮಣಿಯ ಸಂಗೀತನಾಟ್ಯವ ನೋಡ ।
ಲೋರಂತೆ ಜನನಿಕರ ನೆರೆವುದೇನೆಂಬೆ ॥

ದ್ವಾರದೊಳು ಪೊಗಲರಿಯದಲೆ ಹೊರಗೆ ನಿಲ್ಲುವರು ।
ಕೇರಿಕೇರಿಯ ಮಂದಿಯರುಗಳಾಲಿಸಲು ॥ ೨೩

ರವಿಯ ಜೆಲ್ಲಿದೊಡಿಳೆಯ ಸೋಂಕದಂದದಿ ಮನುಜ ।
ನಿವಹ ನಿಲ್ವುದು ಗೃಹವ ಸುತ್ತುವರಿದವುವು ॥
ಯುವಕ ಹೆಂಗಳು ಬಾಲವೃದ್ಧರೆನದಾ ಕಂಠ ।
ರವಕೆ ಬೆರಗಾಗಿ ಮೌನದಿ ಕೇಳ್ವರೊಲಿದು ॥ ೨೪

ಇನಿತು ಗಣಿಕಾಕುಲದ ನಿಜವೃತ್ತಿಯನು ಗೈದು ।
ದಿನಗಳೆವಳಾದೊಡಾ ನಾರಿಹೃದಯದೊಳು ॥
ಗುಣ ಸಮೂಹವು ತುಂಬಿ ತುಳುಕುತಿಹುದೆಂದೆನಲು ।
ಘನ ತೋಷದಾಯಕಮದಲ್ತೆ ಧರಣಿಯೊಳು ॥ ೨೫

ಮತಿವಂತೆಯುಷಯಕಾಲದಿ ಗಂಗೆಯಲಿ ಮಿಂದು ।
ಸತತ ದೇಗುಲಕೈದಿ ಭಕ್ತಿಭಾವದೊಳು ॥
ಅತಿಹೇಯವಾದ ಗಣಿಕಾಜನ್ಮವನು ಬೇಗ ।
ಹತಗೆಡಿಸಿ ಸಲಹೆಂದು ಶಿವನ ಬೇಡುವಳು ॥ ೨೬

ರಳಿ ನಿಜಮಂದಿರಕೆ ಬರುವ ಬಡಬಗ್ಗರಿಗೆ ।
ರುಡ ಕುಂಟರಿಗಿತ್ತು ದಾನ ಧರ್ಮವನು ॥
ರಿದು ಸಾಧುಗಳನಾದರದೊಳುಪಚರಿಸುತಲಿ ।
ರಿದುಃಖಿಗಳನು ಸಂತವಿಪಳನವರತ ॥ ೨೭ ॥

ಡುವಳು ಕರುಣಾದ್ರ್ರವಾಣಿಯಿಂದೊವ್ಮೊವ್ಮೆ ।
ಾಡೆ ಮರುಕವಗೊಂಬಳಿರದೆ ಮನದೊಳಗೆ ॥
ಡಿದುದನೊಲಿದಿತ್ತು ಗತಿಹೀನರನು ಪೊರೆದು ।
ೀಡೆ ಮಹದಾನಂದಮವಳ ಕೃತಿ ಧರೆಗೆ ॥ ೨೮ ॥

ಪರಿಯೊಳಖಿಲ ಸುಖಸಂಪದದಿ ನೆಗಳುತಿರ ।
ಪುರದೊಳೋರ್ವ ವಿಪ್ರನು ಕುಷ್ಠರೋಗಿ ॥
ಾಪ್ರಗೆಟ್ಟಿರುವುದವಸಂಗ ಬಲು ನೋವಿಂದ ।
ಾಪಬಡುತಿರ್ಪನನವರತ ವ್ಯಾಧಿಯಿಂದೊಳು ॥ ೨೯ ॥

ೀರುತಿರೆ ಕೀವುನೆತ್ತರು ವೈತರಣಿನದಿಯು ।
ಾರೆಯುಂಪದಿ ತೋರ್ಪುದವಸಂಗದೊಳಗೆ ॥

ಸಾರುತಿಹ ವ್ರಣದ ಹೊಲಸಿಕೆಗೆ ನೊಣಗಳು ಮುತ್ತಿ ।
ಭೂರಿ ಹಿಂಸೆಯನಿತ್ತು ಬಳಲಿಪುವು ಸತತ ॥ ೩೦ ॥

ಹೊದ್ದಿರ್ದ ಬಟ್ಟೆಬರೆಗಳು ರಕುತದೊಳು ಮುಳುಗಿ ।
ತೊಯ್ದು ಕೊಂಡಿರ್ಪುವೈ ನಿರುತಮಾದ್ವಿಜನು ॥
ಎದ್ದಲ್ಲಿ ನಿಂತಲ್ಲಿ ಕುಳಿತಲ್ಲಿ ಕೀವಿಂದ ।
ಒದ್ದೆಯಾಗುವುದು ದುರ್ಗಂಧ ಹಬ್ಬುವುದು ॥ ೩೧ ॥

ಊರ ಬೀದಿಯೊಳವನು ನಡೆದು ಬರೆ ದುರ್ಗಂಧ ।
ಬೀರುತಿರಲದನು ಸೈರಿಸದೆ ಮನೆಯೊಳಗೆ ॥
ಸೇರಿ ಬಾಗಿಲನಿಕ್ಕುವರು, ಮೂಗು ಮುಚ್ಚುವರು; ।
ಓರೆಯಾಗುವರು ದಾರಿಗರು ಮೆಯ್ತೆಗೆದು ॥ ೩೨ ॥

ಇನಿತೊಂದು ಪಾಪಿಯಹುದಾದೊಡುಂ ಮೊದಲೊಳೆ ।
ಳ್ಳನಿತು ಪುಣ್ಯವಗೈದ ಕತದೊಳಾತನಿಗೆ ॥
ವನಿತೆಯೊದಗಿದಳೈ ಸುಶೀಲೆ ಸುದ್ಗುಣಲೋಲೆ ।
ಅನವರತ ಪತಿಭಕ್ತೆ ವಿಹಿತಚಾರಿತ್ರೆ ॥ ೩೩ ॥

ಕಿನ್ನೇಸರೊಳಗೆದ್ದು ನಿತ್ಯಕರ್ಮವ ಗೈದು ।
ತನ್ನಾಣ್ಮನೆಚ್ಚರಂಗೊಂಡ ವೇಳೆಯಲಿ ॥
ನಿನ್ನವಿಲ್ಲದ ಮನದೊಳೈದಿ ಬಹುಭಕ್ತಿಯಲಿ ।
ತನ್ನೆರಡು ಹಸ್ತದಿಂ ಪಿಡಿದೆಬ್ಬಿಸುವಳು ॥ ೩೪ ॥

ಹೊಲಸು ದುರ್ಗಂಧಕೊಂದಿನಿಸು ಹೇಸದೆ ಮನದಿ ।
ತೊಳೆವಳಾ ವ್ರಣಗಳನು ನಿರ್ಮಲೋದಕದಿ ॥
ಮಲಿನವಾಗಿಹ ಬಟ್ಟೆಬರೆಗಳೆಲ್ಲವನೊಗೆದು ।
ಲು ಚೊಕ್ಕಗೊಳಿಸುತುಡಿಸುವಳು ಅನುದಿನವು ॥ ೩೫ ॥

ೀಸಾದ ಪಾಕವಂ ಗೈದು ಬಾಯ್ಗೀಡುವಳು ।
ಹಾಸಿಗೆಯ ಹಾಸಿ ಮಲಗಿಸುವಳಿನೆಯನನು ॥
ೀಸುವಳು ನೊಣಗಳಟ್ಟುಳಿ ಬಾರದಂದದಲಿ ।
ೀಸರವಗೊಳದಿನಿತು ಸೇವೆಗೈಯುವಳು ॥ ೩೬ ॥

ನ್ನ ದೆಸೆಯಿಂದಲವ ಪರಿತಾಪಗೊಳದಂತೆ ।
ನ್ನಿಯಿಂ ನಡೆನುಡಿವಳತಿ ಭಕ್ತಿಯಿಂದ ॥

ಗನ್ನ ಕೌತುಕತನವ ಸ್ವಪ್ನದೊಳಗುಂ ನೆನೆದು ।
ಕನ್ನೆ ತಾನರಿಯಳ್ಳೈ ಕಡುಸುಪ್ರವೀಣೆ ॥ ೩೭ ॥

ಅವಳ ಹೃದಯದೊಳು ಸದ್ಭಾವನೆಯೆ ತುಂಬಿಹುದು ।
ಅವಳ ವದನದಲಿ ಪಾವನವೆ ನಲಿಯುವುದು ॥
ಅವಳ ಕಂಗಳಲಿ ಕರುಣಾರಸವು ಸೂಸುವುದು ।
ಅವಳೋರ್ವ ದೇವಿಯಂತೆಸೆವಳವನಿಯೊಳು ॥ ೩೮ ॥

ಇಂತಿರಲ್ಲೊಂದಿನದೊಳಾ ವಿಪ್ರನತಿ ದುಗುಡ ।
ದಾಂತಿರಲ್ಕಂಡು ಕೌತುಕದಿ ನಯಭಯದಿ ॥
ಕಾಂತೆ ಬೆಸಗೊಂಡಳಿಂದೇಪರಿಯದುಮ್ಮಾನ ।
ಅಂತರಂಗದಿ ಕುಂದಿ ಕೊರಗಲೇಕೆನುತ ॥ ೩೯ ॥

ವದನ ಕಂದಿರಲೇತಕಧರವೊಣಗಿರಲೇತ ।
ಕೊದಗಿತೆನ್ನಿಂದಲೇನಪರಾಧವೆನುತಾ ॥
ಪದವೆರಡ ಪಿಡಿದು ಬೇಡಿದಳು ಮೃದುಹೃದಯದಾ ।
ಸುದತಿ ಹೃದಯೇಶನೊಡನಧಿಕ ಭಕ್ತಿಯಲಿ ॥ ೪೦ ॥

ಒರೆವೆನೆಂತಕಟ ಪಾವನಮೂರ್ತಿ ನಿನ್ನೊಳಾಂ ।
ಪರಮ ಪಾತಕನು ಪಾಷಂಡ ಘಾತುಕನು ॥
ಧರೆಯೊಳತಿ ನೀಚ ಚಾಂಡಾಲ ಮತಿಹೀನನಹೆ ।
ಕರೆವೆನೆಂತೀ ಮೋರೆಯಲಿ ಪ್ರಿಯೇ ಎನುತ ॥ ೬೧ ॥

ಆಲಿಸಾದೊಡೆ ಪೇಳ್ವೆನೀ ತುಚ್ಛ ಹೃದಯವನು ।
ಬಾಲೆ ಲಕ್ಷ್ಮೀಬಾಯಿ ಸೆಳೆದಿರ್ಪಳದರಿಂ ॥
ತಾಳಲಾರದೆ ಮಾರಹತಿಗೆ ತರಹರಿಸುವೆನು ।
ಕಾಳಾಹಿವೇಣಿಯನು ಕೂಡಲೆಳಸುವೆನು ॥ ೪೨ ॥

ಭೂರಿ ಸಿರಿ ರೂಪು ಯೌವನಗಳಿಂದೆಸೆಯುವಾ ।
ನಾರಿ ಈ ಕುಷ್ಠರೋಗಿಯನೀಕ್ಷಿಸುವಳೇ? ॥
ದಾರಿದ್ರ್ಯ ನೀಚ ಕ್ರೂರಾತ್ಮನಲಿ ದಯೆದೋರಿ ।
ನಾರುತಿಹ ದೇಹವನು ಸ್ಪರ್ಶಗೈಯುವಳೇ? ॥ ೪೩ ॥

"ಆಗದೂರಿಗೆ ಹೋಗದಾ ಚೀಟಿ" ಎಂಬಂತೆ ।
ನಾಗವೇಣಿಯ ಬಯಸಿ ಹಂಬಲಿಸಿ ಬರಿದೆ ॥

ನೀಗುವೆನು ಕೊರಕೊರಗುತೀ ಪ್ರಾಣವೆಂದೆನಲು ।
ಆಗ ಕಂಬನಿದುಂಬಿ ನೋಡಿ ಬ್ರಾಹ್ಮಣಿಯು ॥ ೪೪ ॥

ಮನದಳಲನುಳಿದು ಸಂತಸದೊಳಿರ್ಪುದು ದೇವ ।
ಇನನಸ್ತಮಿಸುವ ಮುನ್ನವೆ ಲಕ್ಷ್ಮಿಬಾಯಿ ॥
ಯನುಮತಿಯ ಪಡೆದು ಬಂದೀ ನಿಮ್ಮ ಹೃದಯದುರಿ ।
ತಣಿಸುವೆನು ನನ್ನೊಳು ಪತಿವ್ರತವಿರ್ದೊಡಿಂದು ॥ ೪೫ ॥

ಎಂದು ಶಪಥದಿ ನುಡಿಯಲಾ ವಿಪ್ರನತಿ ಬೇಗ ।
ಪೊಂದಿದಾನಂದ ವಿಸ್ಮಯದಿಂದ ಸತಿಗೆ ॥
ಚಂದದಪ್ಪಣೆಯನಿತ್ತವಳ ಕಳುಹಿಸಲಾಗ ।
ಬಂದಳಾ ಪತಿಭಕ್ತೆ ಶಿವನ ಧ್ಯಾನಿಸುತ ॥ ೪೬ ॥

ಅರಸುತರಸುತ ಲಕ್ಷ್ಮಿಬಾಯಿ ಮಂದಿರದೆಡೆಗೆ ।
ಬರುತಿರಲು ದೂರದಿಂ ಕಾಣುತಾ ವೇಶ್ಯೆ ॥
ವರ ನಿಷ್ಕಳಂಕ ದೇವಿಯ ಮೂರ್ತಿಯಂತಿರ್ಪ ।
ತರುಣಿ ಯಾರಿಸಳಿಲ್ಲಿಗೇಕೆ ನಡೆತಹಳು? ॥ ೪೭

ಎನುತ ಮನದೊಳಗೊಪವಿದಾ ಭಕ್ತಿ ಭಾವದೊಳು ।
ಗಣಿಕೆಯುವಳಿಡೆಗೈದಿ ಕರಯುಗವ ಮುಗಿದು ॥
ವಿನಯದಿಂ ಬೆಸಗೊಂಡಳಾವೆಡೆಗೆ ತೆರಳುತಿಹಿ ।
ರಿಸಿತು ಮೌನದೊಳಾವ ಕಾರ್ಯಕಾರಣದಿಂ ॥ ೪೮ ॥

ಆರಾದೊಡಾವ ಸತ್ಕಾರ್ಯವಿರ್ದೊಡೆ ಮತ್ತು ।
ಭೂರಿ ದುಃಖಗಳಿರ್ದೊಡಿಲ್ಲಿ ಶಂಕಿಸದೆ ॥
ಸಾರಿ ಪೇಳ್ದೊಡೆಯುವರ ಕೋರಿಕೆಯು ಫಲಿಸುವುವು ।
ನಾರಿಯರ ಕುಲಶಿರೋಮಣಿಯೆ ಸದ್ಗುಣಿಯೆ ॥ ೪೯ ॥

ದುರಿತವೆ ನಿಷೇಪಥದೊಳರೆಗಳಿಗೆ ನಿಲಬೇಡಿ ।
ಪರಮ ಪಾಪಿಗಳಿಲ್ಲಿ ಚರಿಪರನವರತ ॥
ನೆರೆ ಪವಿತ್ರತೆಯ ಮನಕೊಕ್ಕರಿಪುದದರಿಂದ ।
ತ್ವರಿತದಿಂ ಪೊರೆವುದೆನೆ ಮನದ ಬಯಕೆಯನು ॥ ೫೦ ॥

ಪೊಂದಿ ಬಾನಂದದಿಂದುಲಿದಳಿಲೆ ವೇಶ್ಯೆ ಕೇ ।
ಳಿಂದೆನಗೆ ಈ ಘೋರ ದುರಿತಮಾರ್ಗದೊಳುಂ ।

ಸಂದಿಸುವುದೊಂದು ಪುಣ್ಯದ ನೆಲೆಯು ಸಾಧಿಸ ।
ಲ್ಕಿಂದು ಮುಖಿ ಬಂದೆ ಧಾವಿಸುತ ನಿನ್ನೆಡೆಗೆ ॥ ೫೧ ॥

ಒರೆಯಲಂಜುವೆನೆನಗೆ ವಚನವೀಯದ ಮುನ್ನ ।
ಸರಸಿಜಾನನೆಯೆ ಕೇಳೆನಲು ಮಹನೊಂದು ॥
ಧರೆಯೊಳತಿ ಪಾಪಿಯುಪ್ಪೀ ಜನ್ಮವೆತ್ತಿದರು ।
ಕೊರಳ ಕೊಯ್ವನಿತು ಪಾತಕಿಯುಲ್ಲವಿದನು ॥ ೫೨ ॥

ನಂಬು ನಂಬೆಲೆ ದೇವಿ ಶಂಭುಶಂಕರನ ಚರ ।
ಣಾಂಬುಜಗಳಾಣೆ ಮರೆಮಾಜದೆನ್ನೊಡನೆ ॥
ಹಂಬಲವನುಳಿದು ಸಕಲವ ಪೇಳ್ವುದೆಂದೆನಲು ।
ಬಿಂಬಾಧರಿಯೊಳೊರೆದಳೆಲ್ಲ ಕಥನವನು ॥ ೫೩ ॥

ಘೋರತರ ಕುಷ್ಠವ್ಯಾಧಿಯೊಳು ನರಳುವನನಿಶ ।
ದಾರಿದ್ರ್ಯದಲಿ ಬಾಳುತಿಹನೆನ್ನ ರಮಣ ॥
ಕೋರುವನು ನಿನ್ನಂಗಸುಖವ ಪಗಲಿರುಳನ್ನ ।
ನೀರ ಮುಟ್ಟನು ಎನಲು ಮುಮ್ಮಲನೆ ಮರುಗಿ ॥ ೫೪ ॥

ಸ್ಥಿರಭಾವದಿಂ ಕೇಳ್ದು ಕೊರಗಬೇಡಮ್ಮಾಜಿ ।
ತೆರಳು ನಿಜಗೃಹಕೆ ನಿನ್ನೆರೆಯನೊಡನರುಹು ॥
ಬರುವ ಹೋಳಿಯ ಹಬ್ಬದಾ ದಿವ್ಯದಿನದಿ ನಾಂ ।
ಹಿರಿದು ಸಂತಸಗೊಳಿಸೆನವನ ಮನದಿರವಂ ॥ ೩೫ ॥

ಎಂದೆನಲ್ಕತಿ ಬೇಗ ಬಂದು ನಿಜಮಂದಿರಕೆ ।
ವಂದಿಸುತಲಿನೆಯಸತಿಗಧಿಕ ಭಕ್ತಿಯಲಿ ॥
ಒಂದುಳಿಯದಂತೆ ಬಿನ್ನವಿಸಲಾನಂದಾಬ್ಧಿ ।
ಮಿಂದನಾ ವಿಪ್ರನಚ್ಚರಿಯನೊಡಗೂಡಿ ॥ ॥ ೩೬ ॥

ಪುಳಕವೆದ್ದಿತು ಹರುಷದಿಂದಮ್ಮೈಮೇಲವಗೆ ।
ಕಳೆಯೇರಿತವನ ಚೆಂದಾದ ಮುಖದೊಳಗೆ ॥
ನಲವಿನಲಿ ಸಕಲೇಂದ್ರಿಯಗಳುಬ್ಬಲುತ್ಸಹದಿ ।
ಗೆಲವಾಂತ ಬೆಳಗುದಿಸಿತಾಗ ಮನದೊಳಗೆ ॥ ೩೭ ॥

ಆಸೆಯಿಂದೆಣಿಸುತಿದ್ದನು ಹೋಳಿಹಬ್ಬಕೆ ।
ಸ್ತೇಸು ದಿನಮಿರ್ಪದೆಂಟೇ ದಿನಸನೊಂದು ॥

ತೋಷವಾಂತನು ಮನದೊಳಾಕೆಯಿಂದೊದಗಲಿಹ ।
ಲೇಸೆನಿಪ ಸುಖವ ನೆನೆನೆನೆದು ಪಗಲಿರುಳು ॥ ೫೮ ॥

ಬರಲು ಹೋಳಿಯ ದಿನವು ಪುರದಿ ಗಲಿಬಿಲಿಯೆದ್ದು ।
ಕುರುಜು ತೋರಣವು ನೆರೆ ಮೆರೆದುವೆಲ್ಲೆಲ್ಲು ॥
ಪುರುಷನಾರಿಯರೆನ್ನದೆಲ್ಲರಾಡುತಲಿರ್ದ ।
ರುರೆ ಬಣ್ಣದೋಕುಳಿಯನಧಿಕ ಲೀಲೆಯಲಿ ॥ ೫೯ ॥

ಆ ದಿನದೊಳಾವೆಡೆಯ ಹಾದಿಯನ್ನೀಕ್ಷಿಸಲು ।
ಸಾದರದ ಹಾಸ್ಯಲೀಲಾವಿನೋದದೊಳು ॥
ಮೋದಗೊಂಡಿರ್ಪುದಾ ನಗರದೊಳ್ ಜನನಿಕರ ।
ಕಾದಿರ್ಪನಮಮ ವಿಪ್ರನು ಕಾತರದೊಳು ॥ ೬೦ ॥

ಕಂಜಸಖ ಕೋಪಾಗ್ನಿಯನು ಕಳೆದು ಶಾಂತಿಯಲಿ ।
ಸಂಜೆವೆಣ್ಣಿನ ಮನೆಗೆ ಪೋಪೆನೆಂದೆನಲೂ ॥
ಮಂಜುಳಾಕರೆ ಲಕ್ಷ್ಮೀಬಾಯಿ ಯಟ್ಟಿದಳೊಂದು ।
ರಂಜಿಸುವ ಪಾಲಕಿಯನಿತ್ತು ಚಾರರನು ॥ ೬೧ ॥

ತ್ವರಿತದಿಂದೈದಿ ಬ್ರಾಹ್ಮಣಿಗವರು ಬಿನ್ನವಿಸೆ ।
ಹರುಷದಿಂದಾಕೆ ಪಲ್ಲಕ್ಕಿಯೊಳು ಪತಿಯು ॥
ಕರಯುಗದೊಳೆತ್ತಿ ತಂದಿರಿಸೆ ತೆರಳಿದರಾಗ ।
ಪುರದ ನೋಟಕರು ಕಂಡೋರ್ವರೋರ್ವರಿಗೆ ॥ ೬೨ ॥

ಅಲ್ಲಲ್ಲಿ ತೋರಿ ಪೇಳುವರು ನೋಡೀ ವಿಪ್ರ ।
ಸಲ್ಲಲಿತಗಾತ್ರೆ ಲಕ್ಷ್ಮೀಬಾಯಿಯೆಡೆಗೆ ॥
ಪಲ್ಲಕ್ಕಿಯೊಳಗೈದುತಿರ್ಪನೀತನ ಪುಣ್ಯ ।
ಸೊಲ್ಲಿಸಲ್ಕಸದಳವಿದಧಿಕ ಸೋಜಿಗವು ॥ ೬೩ ॥

ಎಂತಿವನ ಬಳಿಸೇರ್ದು ನಿಂತು ಮಾತಾಡುವಳು? ।
ಎಂತು ಕೊಳೆತಿಹ ಮೈಯ ಸ್ಪರ್ಶಗೈಯುವಳೊ! ॥
ಕಾಂತೆ ದುರ್ಗಂಧವಾಸನೆಯ ಸೈರಿಪಳೆಂತೊ! ।
ಅಂತಕಾರಿಯೆ ಬಲ್ಲನವಳ ಹೃದಯವನು ॥ ೬೪ ॥

ಹುಚ್ಚೊ ಮೇಣಲ್ಲದೊಡೆ ವಿಭ್ರಮೆಯೊ ಬ್ರಾಂತೊ? ಎಂ ।
ದಚ್ಚರಿಯೊಳೀಕ್ಷಿಸುವುದೆಲ್ಲ ಜನನಿಕರ ॥

ಸಚ್ಚರಿತೆಯುಪ್ಪ ಪತ್ನಿಯೊಳು ಪ್ರೀತಿಯನುಳಿದು ।
ತುಚ್ಛ ನೋಡುವನಿದಕೊ ಬಯಸಿ ವೇಶ್ಯೆಯನು ॥ ೬೫ ॥

ಎಂದೆಲ್ಲರಾಡುತಿರಲೊಂದನವನೆಣಿಸದೆಯೆ ।
ಮುಂದೆ ತೆರಳುತಲಿರ್ದನಧಿಕ ಲೀಲೆಯೊಳು ॥
ಮಂದಿ ಹಳಿದಾಡೆ ಮದಮುಖನದಕೆ ಕುಗ್ಗುವನೆ? ।
ಒಂದಕಿಮ್ಮಡಿಯಾದುದವನ ಕಾತರವು ॥ ೬೬ ॥

ತಂದಿಳಿಸೆ ಲಕ್ಷ್ಮಿಯಾ ಗೃಹದ್ವಾರಕನುಚರರು ॥
ಬಂದು ಚರಣವ ತೊಳೆದು ಹಸ್ತಲಾಗವನು ॥
ಚಂದದಿಂದಿತ್ತು ಕರದೊಯ್ದು ಮನ್ನಿಸಿದರಾ ।
ನಂದಾಬ್ಧಿಯೊಳು ಮಿಂದನಾಗ ಹಾರುವನು ॥ ೬೭ ॥

ಪನ್ನೀರಿನಿಂದ ಸ್ನಾನವಗೈಸಿ ಕನ್ಮೆನುವ ।
ಚೆನ್ನ ಜವ್ವಾಜಿಪುನುಗುಗಳ ಲೇಪಿಸುತ ॥
ಬಣ್ಣದುಡುಗೊರೆ ತೊಡುಗೆಗಳನೀಯುತುಪಚರಿಸಿ ।
ಉನ್ನತಾಸನದೊಳೇರಿಸಿದಳಾ ಕುಶಲೆ ॥ ೬೮ ॥

ುರುಗುತಿಹ ಚಿನ್ನದಾ ಹರಿವಾಣದಲಿ ತುಂಬಿ ॥
ುರುತರದ ಭಕ್ಷ್ಯಗಳನಿರಿಸಿ ಮುಂಗಡೆಯೆ ॥
ರಸುವರ್ಣದ ದೀಪ ಬೆಳಗಿ ಸಂತೋಷದೊಳು ।
ರಿಪರಿ ಫಲಾಹಾರಕೆಡೆಗೈದು ಬಳಿಕ ॥ ೧೯ ॥

ರಳು ಮಾಣಿಕ ಮುತ್ತು ವಜ್ರ ವೈಢೂರ್ಯದೊಳು ।
ರಚಿಸಿದ ಹೊನ್ನಕಲಶದಿ ಪೂರ್ಣಜಲವು ॥
ರತೊಂದು ಮಣ್ಣಭಾಜನದಿ ಸಲಿಲವ ತುಂಬಿ ।
ರುಣಿಮಣಿ ವಿಪ್ರನಿದಿರಿನೊಳಿಡುತ ಮುದದಿ ॥ ೨೦ ॥

ರಮುಗಿದು ಸ್ವೀಕರಿಪುದೆಲೆ ದೇವ ತವದಾಸಿ ।
ಿಭಕ್ತಿಯೊಳು ಗೈವ ಸೇವೆಗಳನೆನಲು ॥
ರಮತೋಷದಿ ಹಿಗ್ಗಿ ಹೊಯ್ ಚೆಂಡಿನಂತುಬ್ಬಿ ।
ರನೋಟದಿಂದಲೀಕ್ಷಿಸುತಲಿಲ್ಲವನು ॥ ೨೧ ॥

ುಂಭವೆರಡರೊಳಂಬು ತುಂಬಿರಲ್ಕಾಣುತಾ ।
ುಂಬುಕಂಠೆಯೊಳೆಂದನೆಲೆ ಮನೋಹರಿಯೆ ॥

ತಂಬಿಗೆಯೊಳೇನು? ಮಡಕೆಯೊಳೇನು? ಪೇಳ್ವುದೆನೆ ।
ಬಿಂಬಾಧರದೊಳು ನಸುನಗೆ ಮಿಸುಗಿ ಚದುರೆ ॥ ೭೨ ॥

ನಲವಿನಿಂದುಲಿದಳೆಲೆ ವಿಪ್ರಕುಲತಿಲಕ ಕೇಳ್ ।
ಪೊಳೆವ ಪೊಂಗಲಶದಲಿ ತುಂಬಿಹುದು ಲವಣ ॥
ಮಿಳಿತವಹ ಜಲವು ಪೆರತೊಂದು ಮಡಕೆಯೊಳಿಹುದು ।
ಸಲೆ ಜಾಹ್ನವಿಯ ಪವಿತ್ರಾಂಬುವೆರಡರೊಳು ॥ ೭೩ ॥

ದೇವ ತವಚಿತ್ತಕಾವುದು ಹಿತವೊ ಕೊಂಡದಂ ।
ಆವುದೊಲ್ಲದೊ ಅದನು ಬಿಡುವುದೆನಲಾಗ ॥
ಆ ವಿಪ್ರನಾಲೋಚಿಸುತ ತನಗೆ ಜಾಹ್ನವಿಯ ।
ಪಾವನಾಂಬುವೆ ಲೇಸು ಕೊಳುವೆನದನೆನಲು ॥ ೭೪ ॥

ಅಂತಾದೊಡೀ ಪಲಬರುಂಡುಳಿದ ಉಚ್ಛಿಷ್ಟ ।
ವೆಂತು ಸೇವಿಪಿರಿ ಮನಕೊಗ್ಗುವುದೆ ಬರಿದೆ ॥
ಭ್ರಾಂತಿಗೊಂಡೈತಂದಿರೇಕೆ? ಶುದ್ಧಾನ್ನವಿರೆ ।
ಸಂತೋಷದಿಂದುಂಡು ಸುಖಿಸಲೇನ್ಕೊರತೆ? ॥ ೭೫ ॥

ರಗಿನಂದಕೆ ಸೋಲ್ತು ಲವಣಮಿಶ್ರಿತ ಜಲವ ।
ಳಲದುವೆ ತೃಷ್ಣೆ ಹೆಚ್ಚಿಸದೆ ತಣಿಸುವುದೆ? ॥
ರುಳಾಗಿ ರೂಪಯೌವನಕೆ ಕಲುಷದಿ ನಿಚ್ಚ ।
ತಿರ್ಸಳನು ಕೂಡೆ ತೃಷ್ಣೆಯಡಗುವುದೆ? ॥ ೭೬ ॥

ಚ್ಚುತಾ ತೃಷ್ಣೆ ಬಲಿತೇರುವುದು ದಿನದಿನಕೆ ।
ಚ್ಚುತಾಶಾಪಾಶ ಬಿಗಿಯುವುದು ಮನವ ॥
ಚ್ಚೆಲುಂ ಕೊರಕೊರಗಿ ಸುಖಶಾಂತಿಗಳ ಕೆಡಿಸಿ ।
ಚ್ಚೆಹಿಡಿಸುತ ಶಕ್ತಿಯುಳಿಸುವುದು ಕೊನೆಗೆ ॥ ೭೭ ॥

ಣ್ಣೆಗಾನಂದವಿಲ್ಲದೊಡು ಮಡಕೆಯೊಳಿರ್ದ ।
ಹ್ನವೀ ಜಲಪಾನವಂ ಗೈಯುಲದರಿಂ ॥
ನ್ನಿರ್ದ ದಾಹವಡಗುವುದು ತೃಪ್ತಿಯನೈದಿ ।
ನ್ನತಾನಂದ ಸುಖವಿತ್ತಪ್ರದು ಮನಕೆ ॥ ೭೮ ॥

ತೆ ಪಾವನೆಯುಪ್ಪ ತತ್ಕಾಂತೆಯೊಡಗೂಡ ।
ತರಂಗವ ಮುಟ್ಟಲರಿದು ಸಂತಾಪ ॥

ಶಾಂತಿಯೆಂಬುಡು ಕಿರಣ ಬೀಳ್ದು ಹೃತ್ಕುಮುದಿನಿಯು ।
ಚಿಂತೆಯೋಡುತ ವಿಕಾಸವನು ಪೊಂದುವುದು ॥ ೭೯ ॥

ಸೊಕ್ಕು ಜವ್ವನೆಯುಲಿದ ನುಡಿಯನಾಲಿಸಿ ಮುದದಿ ।
ಕಕ್ಕುಲಿತೆಗೊಂಡು ತಾ ತನ್ನ ನಡೆಗಳುಕಿ ॥
ಧಿಕ್ಕಾರವಿರಲಿ! ಮಮ ಸುಟ್ಟ ಬಾಳ್ಗೆನುತಾಗ ।
ಫಕ್ಕನೆದ್ದೈತಂದನತಿ ವಿರಕ್ತಿಯಲಿ ॥ ೮೦ ॥

ಅಂಗನೆಯು ಸಹಿತ ಗಂಗಾತಡಿಯೊಳಿರುತಿರಲು ।
ತುಂಗ ಜಪತಪವ ಶ್ರದ್ಧೆಯೊಳೆಸಗುತಿರಲು ॥
ಅಂಗದೊಳಗಿರ್ದ ದುರ್ವ್ಯಾಧಿಗಳ್ ದಿನದಿನದಿ ।
ಪಿಂಗಿತಾನಂದ ಸುಖಸಿರಿವೆತ್ತ ಕೊನೆಗೆ ॥ ೮೧ ॥

ನಿಲದು ಕಾಮುಕನ ಬಳ †ಲಜ್ಜೆಯಣಮೆಂಬ ನುಡಿ ।
ಫಲಿಸಿತೀ ದ್ವಿಜನಿಂದ; ಕಾಮಿ ತಾನೆನಿಸುಂ ॥

---

† ಲಜ್ಜೆಯಣಂ = ಸ್ವಲ್ಪವಾದರೂ ಲಜ್ಜೆ.

ಬಲಹೀನನಾಗಿರಲಿ, ರುಜೆಯಿಂ ನರಳುತಿರಲಿ, ।
ನುಲಗಿದಾ ಹಸೆಹಿಡಿದು ಅಲ್ಲೆ ಬಿದ್ದಿರಲಿ ॥ ೮೨ ॥

ಬಳಲಿ ಬೆಂಡಾಗಿರಲಿ, ಬಡತನದ ಬಾಳ್ವೆಯುಲಿ ।
ಕಳೆಗುಂದಿರಲಿ, ಹೊಟ್ಟೆಗುಣಿಸಿಲ್ಲದಿರಲಿ, ॥
ಒಲಿದು ಭಕ್ತಿಯುಲಿ ಸೇವಿಸ ಮಡದಿ ತನಗಿರಲಿ ।
ಅಳುಪದಿರನಾ ಕಾಮಿ ಪರಸತಿಯುನಕಟಾ! ॥ ೮೩ ॥

ಬರಿಯ ಜೆಲ್ವಿಕೆಗೆ ಬಿನ್ನಣಕೆ ಬೆಡಗಿಗೆ ಸೋತು ।
ಮರುಳಾಗಿ ಕಪಟ ಪ್ರೇಮವನೆಚ್ಚಿ ಜನರು ॥
ಪರಸತಿಯುನಾಶಿಸದೆ ತಂತಮ್ಮ ಕೈವಿಡಿದ ।
ವರ ಪತ್ನಿಯುರಕೂಡಿ ಸುಖಮಿರಲಿ ಸತತ ॥ ೮೪ ॥

ಅರಿಯೆ ನಾ ಕಾವ್ಯ ಲಕ್ಷಣದಿರವನೀ ಕೃತಿಯು ।
ನೊರೆದೆನೆನ್ನಲ್ಪಮತಿಯಿಂದಿದರೊಳಿರುವ ॥
ಕೊರತೆಗಳ ತೊರೆದು ನೀರುಳಿದು ಹಾಲನೆ ಹೀರು ।
ವರ ಸಂಚೆಯೆನೆ ರಸವ ಸವಿಯುವುದು ಬುಧರು ॥ ೮೫ ॥

ಮೆರೆವಾಮಲಕಪುರದೊಳಿರುವಾಕೆಯಾಪುರದೊ ।
ಳಿರುವ ಸಿರಿಮದನಂತ ಜಿನಪತಿಯ ಚರಣಾಂ ॥

ಬುರುಹ ಮಧುಕರಿ ಜೈನಮಹಿಳೆ ಕನ್ನಡದ ಸೋ ।
ದರಿಯಂದಿರಿಗೆ ನಿವೇದಿಸಿದಳೀ ಕೃತಿಯ ॥ ೮೬

ಸಮಾಪ್ತಿ

ಮಾರುತಿ ಪ್ರಿಂಟಿಂಗ್ ವರ್ಕ್ಸ್, ಕಾರ್ಕಳ.

ಈ ಪುಸ್ತಕವನ್ನಪೇಕ್ಷಿಸುವವರು ಒಂದಾ

ಸ್ಟಾಂಪು ಕಳುಹಿಸಿ ಕೆಳಗಿನ ವಿಳಾಸದವರಿಂದ ಧನ

ರ್ಥವಾಗಿ ಪಡೆಯಬಹುದು.

ಎನ್. ಎಸ್. ಜೈನಿ,

ಪೋಸ್ಟು ನೆಲ್ಲಿಕಾರ,

ಕಾರ್ಕಳ, ದ. ಕನ್